## ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರೂಪು–ರೇಷೆಗಳು, ಅಧಿಕಾರ ವ್ಯಾಪ್ತಿ ನೀಡಿಕೆ ಬಗ್ಗೆ ಆದೇಶ.

ಉಲ್ಲೇಖ : ಅಧಿಸೂಚನೆ ಸಂಖ್ಯೆ ಡಿಪಿಎಆರ್ 18 ಕೆಒಎಲ್ 92, ದಿನಾಂಕ 6ನೇ ಫೆಬ್ರವರಿ 1992 ಮತ್ತು ಆದೇಶ ಸಂಖ್ಯೆ ದಿನಾಂಕ 29 ಫೆಬ್ರವರಿ 1992.

**ಪ್ರಸ್ತಾವನೆ**

ಸರ್ಕಾರದ ಭಾಷಾ ನೀತಿಗೆ ಸಂಬಂಧಿಸಿದ ಆದೇಶಗಳು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿವೆಯೇ ಎಂಬುದನ್ನು ಪರಿಶೀಲಿಸಿ ಸಲಹೆ ಸೂಚನೆಗಳನ್ನು ನೀಡಲು ಹಾಗೂ ಸರ್ಕಾರ ಈಗಾಗಲೇ ಒಪ್ಪಿರುವ ಡಾ: ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ತರುವ ಉದ್ದೇಶದಿಂದ ಕಾರ್ಯ ವಿಧಾನವನ್ನು ರೂಪಿಸಲು ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಪ್ರಾಧಿಕಾರದ ರೂಪುರೇಷೆಗಳು, ಅಧಿಕಾರ ವ್ಯಾಪ್ತಿ ಇತ್ಯಾದಿಗಳ ಬಗ್ಗೆ ಆದೇಶ ಹೊರಡಿಸಬೇಕಾಗಿದ್ದೆ.

**ಆದೇಶ ಸಂಖ್ಯೆ ಡಿಪಿಎಆರ್ 182 ಕೆಒಎಲ್ 92**

**ಬೆಂಗಳೂರು, ದಿನಾಂಕ 6ನೇ ಜುಲೈ 1992**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರೂಪು–ರೇಷೆಗಳು, ಅಧಿಕಾರ ವ್ಯಾಪ್ತಿ, ಲೆಕ್ಕಶೀರ್ಷಿಕೆ ಬಗ್ಗೆ ಸರ್ಕಾರ ಕೆಳಕಂಡಂತೆ ಆದೇಶಿಸಿದೆ :

1. **ಕಾರ್ಯವ್ಯಾಪ್ತಿ :**

ಅ) ಸರ್ಕಾರದ ಆಡಳಿತ ಭಾಷಾ ನೀತಿಯನ್ನು ಜಾರಿಗೆ ತರಲು ಬೇರೆ ಬೇರೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ಥಳೀಯ ಸಂಸ್ಥೆಗಳು, ಸರ್ಕಾರದಿಂದ ರಚಿತವಾದ ಹಾಗೂ ಸರ್ಕಾರದ ಅನುದಾನ ಪಡೆಯುತ್ತಿರುವ ಎಲ್ಲ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ;

ಆ) ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಕಾರ್ಯವಿಧಾನಗಳನ್ನು ರೂಪಿಸಿ ಸಂಬಂಧಪಟ್ಟ ಇಲಾಖೆಗಳ ಮೂಲಕ ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು;

ಇ) ಕನ್ನಡವನ್ನು ಆಡಳಿತ ಭಾಷೆಯಾಗಿ ಸಂಪೂರ್ಣವಾಗಿ ಜಾರಿಗೆ ತರಲು ಇರುವ ಅಡಚಣೆಗಳನ್ನು ಗುರುತಿಸಿ ಅವುಗಳನ್ನು ನಿವಾರಿಸಲು ಸರ್ಕಾರಕ್ಕೆ ಸಲಹೆ ನೀಡುವುದು;

ಈ) ಆಡಳಿತ ಪೂರಕ ಸಾಹಿತ್ಯ, ತರಬೇತಿ, ಸೇವಾಪರೀಕ್ಷೆಗಳು (ಭಾಷಾ ಪರೀಕ್ಷೆ) ಇವುಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡುವುದು;

ಉ) ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ಕಛೇರಿಗಳಲ್ಲಿ ಕನ್ನಡ ಬಳಕೆ ತನಿಖೆ ಕೈಗೊಂಡು ಕನ್ನಡ ಅನುಷ್ಠಾನ ಸಂಬಂಧ ಆದೇಶಗಳು ಉಲ್ಲಂಘನೆಯಾಗಿದ್ದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ವರದಿ ಮಾಡುವುದು;

ಊ) ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರ ವಹಿಸಬಹುದಾದ ಇತರ ಯಾವುದೇ ವಿಷಯಗಳು.

2. **ಪ್ರಾಧಿಕಾರದ ಅಧಿಕಾರವ್ಯಾಪ್ತಿ :**

ಅ) ಪ್ರಾಧಿಕಾರದ ಅಧ್ಯಕ್ಷರು ಯಾವುದೇ ಕಛೇರಿಗೆ ಭೇಟಿ ನೀಡಲು ಅಧಿಕಾರ ಹೊಂದಿರುತ್ತಾರೆ.

ಆ) ಪ್ರಾಧಿಕಾರದ ಅಧ್ಯಕ್ಷರು ಈ ಆದೇಶದಲ್ಲಿನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿಯೊಂದಿಗೆ, ಕಛೇರಿಯೊಂದಿಗೆ ನೇರವಾಗಿ ವ್ಯವಹರಿಸಿ, ಮಾಹಿತಿ, ಸ್ಪಷ್ಟೀಕರಣ ಪಡೆಯಬಹುದು ಹಾಗೂ ನೀಡಬಹುದು.

3. **ಸದಸ್ಯರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ :**

ಪ್ರಾಧಿಕಾರದ ಸದಸ್ಯರುಗಳ ಪ್ರಯಾಣ ಭತ್ಯೆ, ದಿನಭತ್ಯೆ, ಸಭಾಭತ್ಯ ಇತ್ಯಾದಿ ಸೌಲಭ್ಯಗಳು ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಆದೇಶಗಳ ಪ್ರಕಾರ ಕೊಡಲಾಗುವುದು.

4. **ಲೆಕ್ಕಶೀರ್ಷಿಕೆ :**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ, ಅವರ ಆಪ್ತ ಸಿಬ್ಬಂದಿಗೆ ಪ್ರಾಧಿಕಾರದ ಸದಸ್ಯರಿಗೆ ಮತ್ತು ಒದಗಬಹುದಾದ ಇತರ ಯಾವುದೇ ಖರ್ಚನ್ನು ಲೆಕ್ಕ ಶೀರ್ಷಿಕೆ "2052–ಸಚಿವಾಲಯ ಸಾಮಾನ್ಯ ಸೇವೆ–01–ಸಚಿವಾಲಯ–02 ಸಮಿತಿಗಳು ಮತ್ತು ಸಮ್ಮೇಳನಗಳು, ನ್ಯಾಯಾಧಿಕರಣಗಳು ಮೊದಲಾದವುಗಳಿಗೆ ಸಂಬಂಧಪಟ್ಟ ವೆಚ್ಚ (ಯೋಜನೇತರ) ದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಅನಧಿಕೃತ ಟಿಪ್ಪಣಿ ಕ್ರಮಾಂಕ ಆಇ 2791 ವೆಚ್ಚ–5:92, ದಿನಾಂಕ : 6–7–1992, ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ:
**(ಸಣ್ಣನಂಜೇಗೌಡ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಕನ್ನಡ ಶಾಖೆ)